SY 2004

Reg. No. : ....................................

Name : ....................................

# SECOND YEAR HIGHER SECONDARY EQUIVALENCY EXAMINATION, JULY 2025

## Part – II

## KANNADA

**Maximum : 80 Scores**

Time : 2½ Hours

Cool-off Time : 15 Minutes

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ 15 ನಿಮಿಷ ಕೂಲ್ ಆಫ್ ಸಮಯವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**Score**

**1 ರಿಂದ 4 ರವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.** **(4×1=4)**

1. ಹರಿಶ್ಚಂದ್ರ ಕಾವ್ಯವನ್ನು ಬರೆದ ಕವಿ ಯಾರು ?
   (ಸೋಮಕವಿ, ರಾಘವಾಂಕ, ಜನ್ನ, ಪುರಂದರದಾಸ)

2. ಇವುಗಳಲ್ಲಿ ಯಾವುದು ದ್ರಾವಿಡ ಭಾಷಾ ಪರಿವಾರಕ್ಕೆ ಸೇರುವುದಿಲ್ಲ ?
   (ಕನ್ನಡ, ತಮಿಳು, ಸಂಸ್ಕೃತ, ತೆಲುಗು)

3. ಗೌತಮ ಬುದ್ಧನ ವೃತ್ತಾಂತವನ್ನು ಒಳಗೊಂಡ ಕೃತಿ ಯಾವುದು ?
   (ಕಿಸಾಗೋತಮಿ, ಬದುಕು, ನೆರೆ, ಸಾವಿರಾರು ನದಿಗಳು)

4. ಬೇವುಬೆಲ್ಲದೊಳಿಡಲೇನು ಫಲ ಇದು ಸಾಹಿತ್ಯದ ಯಾವ ಪ್ರಕಾರಕ್ಕೆ ಸೇರುತ್ತದೆ ?
   (ನಾಟಕ, ಕೀರ್ತನೆ, ಕಥೆ, ಕಾದಂಬರಿ)

Score

5. ಸರಿ ಹೊಂದಿಸಿ ಬರೆಯಿರಿ : (4×1=4)

| ಅ | ಆ |
|---|---|
| ನೆರೆ | ಸಿದ್ಧಲಿಂಗಯ್ಯ |
| ಸಾವಿರಾರು ನದಿಗಳು | ಎಂ. ಎಸ್. ಸುಂಕಾಪುರ |
| ಮಾವ ಕೊಡಿಸಿದ ಕೋಟು | ದ. ರಾ. ಬೇಂದ್ರೆ |
| ಯುಗಾದಿ | ಕೆ. ಕೆ. ಗಂಗಾಧರನ್ |

**6 ರಿಂದ 10 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕನ್ನು ಉತ್ತರಿಸಿರಿ.** (4×1=4)

6. ಧರೆ – ಈ ಪದದ ಅರ್ಥವನ್ನು ಬರೆಯಿರಿ.

7. ನಸುಗಂಪು – ಈ ಪದವನ್ನು ಬಿಂಗಡಿಸಿ ಬರೆಯಿರಿ.

8. ಸೋಲು – ಈ ಪದದ ವಿರೋಧಾರ್ಥವನ್ನು ಬರೆಯಿರಿ.

9. ಅನುಪಮಾ ನಿರಂಜನರ ಆತ್ಮಕಥೆ ಯಾವುದು ?

10. ಕಣ್ಣು – ಇದರ ಯಾವುದಾದರೂ ಎರಡು ಪರ್ಯಾಯ ಪದಗಳನ್ನು ಬರೆಯಿರಿ.

**11 ರಿಂದ 15 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕನ್ನು ಉತ್ತರಿಸಿರಿ.** (4×2=8)

11. ಪಾಲು – ಹಾಲು.

ಈ ರೀತಿ ಧ್ವನಿ ವ್ಯತ್ಯಾಸಗೊಂಡ ಪದಗಳಿಗೆ ಎರಡು ಉದಾಹರಣೆಗಳನ್ನು ಕೊಡಿರಿ.

12. ಕಾಡಿಗೆ ಹೊರಡುವ ಮೊದಲು ಹರಿಶ್ಚಂದ್ರನು ವಿಶ್ವಾಮಿತ್ರನಿಗೆ ಯಾವುದನ್ನೆಲ್ಲ ಒಪ್ಪಿಸಿ ಕೊಟ್ಟನು ?

13. ಕನ್ನಡದ ಯಾವುದಾದರೂ ಎರಡು ಪ್ರಾದೇಶಿಕ ಉಪಭಾಷೆಗಳನ್ನು ಹೆಸರಿಸಿರಿ.

14. ಕೆಳಗೆ ಕೊಟ್ಟಿರುವ ಗ್ರಾಮ್ಯ ಭಾಷೆಯ ಸಾಲನ್ನು ಶಿಷ್ಟ ಕನ್ನಡಕ್ಕೆ ಪರಿವರ್ತಿಸಿ ಬರೆಯಿರಿ.

ನಡೆದು ಬಾ ಕಂದಯ್ಯ ನಡಗೀಯ ನೋಡೇನು

15. ಕೆಳಗೆ ಕೊಟ್ಟಿರುವ ಸಂಯುಕ್ತ ವಾಕ್ಯವನ್ನು ಎರಡು ಸರಳ ವಾಕ್ಯಗಳಾಗಿ ಬರೆಯಿರಿ.

ಕಳೆದ ಮೂರು ದಿನಗಳಿಂದ ನಿರಂತರವಾಗಿ ಮಳೆ ಸುರಿಯುತ್ತಿದ್ದುದರಿಂದ ಹಲವಾರು ಮನೆಗಳು ಜಲಾವೃತಗೊಂಡಿದ್ದವು.

Score

**16 ರಿಂದ 20 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕನ್ನು ಉತ್ತರಿಸಿರಿ.** **(4×3=12)**

**16.** 'ಸರ್ವ ಚಿತ್ತಾರವ ಮಸಿ ನುಂಗಿತು' – ಈ ಮಾತಿನ ಆಶಯವನ್ನು ವಿಶದಪಡಿಸಿರಿ.

**17.** ಅನುಪಮಾ ನಿರಂಜನರು ಒಮ್ಮೆ ಸಾಹಿತ್ಯ ರಚನೆಯನ್ನು ಕೈಬಿಡಲು ಕಾರಣ ಏನಾಗಿತ್ತು ?

**18.** ಸಾವಿರಾರು ನದಿಗಳು ಕವಿತೆಯಲ್ಲಿ ಬರುವ 'ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ' ಎಂಬ ಸಾಲಿನಲ್ಲಿ ಕವಿ ಏನನ್ನು ಸೂಚಿಸುತ್ತಿದ್ದಾರೆ ? ತಿಳಿಸಿರಿ.

**19.** ಜಲ ಸಂರಕ್ಷಣೆಯ ಮಹತ್ವವನ್ನು ಸಾರುವ ಯಾವುದಾದರೂ ಎರಡು ಘೋಷಣಾ ವಾಕ್ಯಗಳನ್ನು ಬರೆಯಿರಿ.

**20.** ಲೇಖನ ಚಿಹ್ನೆಗಳನ್ನು ಅಳವಡಿಸಿಕೊಂಡು ಬರೆಯಿರಿ.

ಕೋಟು ನೋಡಿದ ಸಿಂಪಿಗನು ಹೊಸಕೋಟು ಹೊಲಿಯುವಷ್ಟು ಶ್ರಮ ಬೀಳುತ್ತದೆ ಸ್ವಾಮಿ ಎಂದು ಹೇಳಿದನು.

**21 ರಿಂದ 25 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕನ್ನು ಉತ್ತರಿಸಿರಿ.** **(4×4=16)**

**21.** ಕಿಸಾ ಗೋತಮಿ ನಾಟಕದಲ್ಲಿ ಬಂದಿರುವ ಈ ಕೆಳಗಿನ ಮಾತುಗಳ ಸ್ವಾರಸ್ಯವನ್ನು ಬರೆಯಿರಿ.

ಸಾವಿಲ್ಲದೆಡೆಯಿಲ್ಲ ನೋವಿಲ್ಲದೆಡೆಯಿಲ್ಲ
ಸಾವು ಜೀವಕ್ಕೆ ನಂಟು ಅದನು ತಪ್ಪಿಸ ಸಲ್ಲ
ಸಾವಿನೊಳು ಮರುಗದಿರು
ಜೀವದೊಳು ಹಿಗ್ಗದಿರು.

**22.** ಒಂದು ಭಾಷೆಯಲ್ಲಿ ಧ್ವನಿ ವ್ಯತ್ಯಾಸ ಎಂದರೇನು ? ಎರಡು ಉದಾಹರಣೆಗಳನ್ನು ಕೊಡಿರಿ.

**23.** ಕೆಳಗೆ ಕೊಟ್ಟಿರುವ ತ್ರಿಪದಿಯ ಭಾವಾರ್ಥವನ್ನು ಬರೆಯಿರಿ.

ಜೂಜಾಡಿ ಪಾಂಡವರು ರಾಜ್ಯವ ಸೋತರು
ಜೂಜಾಡಿ ನಳನು ಬಳಲಿದ – ಕಂದಯ್ಯ
ಜೂಜಿಗೆ ಮನವ ಬಿಡದಿರು

**24.** ಕಾಲಾನುಕಾಲಕ್ಕೆ ಬಡವಂ ಬಲ್ಲಿದನಾಗನೇ – ಈ ಮಾತಿನ ಕುರಿತು ಸೋಮಕವಿಯ ಸಮರ್ಥನೆಯೇನು ? ನೀವು ಓದಿದ ಶತಕ ಪದ್ಯದ ಆಧಾರದಲ್ಲಿ ವಿವರಿಸಿರಿ.

Score

25. ಕೆಳಗೆ ಕೊಟ್ಟಿರುವ ಅನುಪಮಾ ನಿರಂಜನರ ಆತ್ಮಕತೆಯ ಭಾಗವನ್ನು ಜೀವನ ಚರಿತ್ರೆಯ ರೂಪಕ್ಕೆ ಪರಿವರ್ತಿಸಿರಿ.

ನನಗೆ ಬರವಣಿಗೆಗಾಗಿ ಪ್ರತ್ಯೇಕ ಕೊಠಡಿ ಇತ್ತು . ವೃತ್ತಿಯಿಂದಾಗಿ ನನಗೆ ಸಾಕಷ್ಟು ವರಮಾನವೂ ಬರುತ್ತಿತ್ತು. ನಾನು ಬರೆಯಲು ಆರಂಭಿಸಿದೆ. ನನ್ನಲ್ಲಿ ಪ್ರತಿಭೆ ಇತ್ತು . ಬರೆಯಲು ಸಾಕಷ್ಟು ಸ್ವಾತಂತ್ರ್ಯವೂ ಇತ್ತು. ಆದರೆ ಆ ಸಂದರ್ಭದಲ್ಲಿ ನನ್ನಿಂದ ಶ್ರೇಷ್ಠ ಸಾಧನೆ ಯಾಕೆ ಆಗಲಿಲ್ಲ ಎಂಬ ಕೊರತೆ ಈಗಲೂ ನನ್ನನ್ನು ಕಾಡುತ್ತಿದೆ.

**26 ರಿಂದ 30 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕನ್ನು ಉತ್ತರಿಸಿರಿ.** **(4×6=24)**

26. ಯುಗಾದಿ ಕವನದ ಆಶಯವನ್ನು ಬರೆಯಿರಿ.

27. ಮಾವ ಕೊಡಿಸಿದ ಕೋಟಿನ ವಿಶೇಷತೆಗಳ ಕುರಿತು ಲೇಖಕರು ಹೇಳಿದ ಸಂಗತಿಗಳನ್ನು ಸಂಗ್ರಹಿಸಿ ಬರೆಯಿರಿ.

28. ಹರಿಶ್ಚಂದ್ರನು ಕಾಡಿಗೆ ಹೊರಟು ನಿಂತಾಗ ಪ್ರಜೆಗಳು ಗೋಳಿಟ್ಟ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

29. ಸಾವಿರಾರು ನದಿಗಳು ಕವನದಲ್ಲಿ ಅಸಮಾನತೆಯ ವಿರುದ್ಧ ಸಾಮಾನ್ಯ ವರ್ಗದ ಜನರು ನಡೆಸಿದ ಹೋರಾಟ ಹೇಗೆ ಚಿತ್ರಿತವಾಗಿದೆ ? ವಿವರಿಸಿರಿ.

30. ಸಾಸಿವೆ ಕಾಳು ತರಲು ಗೋತಮಿಗೆ ಯಾಕೆ ಸಾಧ್ಯವಾಗಲಿಲ್ಲ ? ಆಗ ಗೋತಮಿಗೆ ಬುದ್ಧನು ನೀಡಿದ ಉಪದೇಶದ ಮಾತುಗಳೇನು ? ವಿವರಿಸಿರಿ.

**31 ಮತ್ತು 32 ರ ಪ್ರಶ್ನೆಗಳಲ್ಲಿ ಯಾವುದಾದರೂ ಒಂದನ್ನು ವಿವರವಾಗಿ ಬರೆಯಿರಿ.** **(1×8=8)**

31. ಪ್ರವಾಹದೊಳಗೆ ಸಿಲುಕಿ ಹಸಿವು ಮತ್ತು ಜೀವ ಭಯದಿಂದ ಕಂಗೆಟ್ಟ ನಾಯಿಯ ದಯನೀಯ ಸ್ಥಿತಿಯನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.

32. ತಾಯಿ ಮತ್ತು ತವರು ಮನೆಯ ಮೇಲೆ ಹೆಣ್ಣಿಗೆ ಇರುವ ಪ್ರೀತಿ ಅಭಿಮಾನಗಳು ಜನಪದ ತ್ರಿಪದಿಗಳಲ್ಲಿ ಹೇಗೆ ವ್ಯಕ್ತವಾಗಿದೆ ? ನೀವು ಓದಿದ ತ್ರಿಪದಿಗಳನ್ನು ಆಧರಿಸಿ ಬರೆಯಿರಿ.

---